**- - ಸಿ.ಸಿ.**

**ನಂ.2117/2025**

**ಪಿ. ಡಬ್ಲ್ಯೂ: 1**

**( ಇಂದು ದಿಃ 13/03/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀ ಆರ್ ಜಿ ಎನ್ ವಕೀಲರಿಂದ,**

ಆರೋಪಿ ಒಟ್ಟು ರೂ. 10 ಲಕ್ಷ ಸಾಲವನ್ನು ನಮ್ಮ ಸಂಸ್ಥೆಯಲ್ಲಿ ಪಡೆದಿದ್ದರು. ಆರೋಪಿ ಒಟ್ಟು 8 ಕಂತುಗಳನ್ನು ಸದರಿ ಪ್ರಕರಣ ದಾಖಲಿಸುವ ಮೊದಲು ಕಟ್ಟಿದ್ದಾರೆ. ಆರೋಪಿಯಿಂದ 52 ಕಂತುಗಳು ಬಾಕಿ ಇದ್ದವು. ಒಟ್ಟು 60 ಕಂತುಗಳ ಅಡಮಾನ ಸಾಲವನ್ನು ಆರೋಪಿಗೆ ನೀಡಿರುತ್ತೇವೆ. ಹರಾಜಿನ ಕ್ರಮ ಕೈಗೊಂಡಿರುತ್ತೇವೆ. ಹರಾಜು ಆಗಿರುವುದಿಲ್ಲ ಅದು ಚಾಲ್ತಿಯಲ್ಲಿದೆ. ಆರೋಪಿಯು ಭಟ್ಕಳ ಶಾಖೆಯಲ್ಲಿ ಸಾಲ ಪಡೆದಿದ್ದರು. ಆರೋಪಿಗೆ ಸಾಲ ನೀಡುವಾ ನಾನು ಸದರಿ ಸಂಸ್ಥೆಯಲ್ಲಿ ಇದ್ದೇನು. ಪ್ರಕರಣ ದಾಖಲಿಸಿದ ನಂತರ ಆರೋಪಿಯೊಂದಿಗೆ ರೂ. 1 ಲಕ್ಷ ರಾಜಿಗೆ ಒಪ್ಪಿಕೊಂಡು ಇನ್ನುಳಿದ 1 ಲಕ್ಷ ಸೇವಿಂಗ್ ಖಾತೆಗೆ ಹಾಕಲಾಗಿದೆ. ಆರೊಪಿ ಒಟ್ಟು ರೂ. 2 ಲಕ್ಷ ಸಾಲದ ಮೊತ್ತ ತುಂಬಿರುತ್ತಾರೆ ಎಂದರೆ ಸರಿಯಲ್ಲ. ರೂ. 5 ಲಕ್ಷ ಬಾಕಿ ಇದೆ ಎಂದು ತೋರಿಸಲು ಸಾಲದ ಸ್ಟೇಟಮೆಂಟನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಸ್ಟೇಟಮೆಂಟಿನ ಪ್ರಕಾರ ಆರೋಪಿಯಿಂದ ಜಾಸ್ತಿ ಮೊತ್ತ ಬಾಕಿ ಇದೆ ಆದರೆ ಆರೋಪಿ ರೂ. 5 ಲಕ್ಷಕ್ಕೆ ಚೆಕ್ಕನ್ನು ನೀಡಿರುತ್ತಾರೆ. ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿದ ನಂತರ ಆರೋಪಿಯೊಂದಿಗೆ ನಾವು ಸಂಪರ್ಕಿಸಿದ್ದು ಆರೋಪಿಯು ಕರೆಯನ್ನು ಸ್ವೀಕರಿಸಿರುವುದಿಲ್ಲ. ಆರೋಪಿ ಪ್ರತಿ ಕಂತನ್ನು ಸರಿಯಾಗಿ ಕಟ್ಟುತ್ತಿದ್ದಾರೆ ಹಾಗೂ ಚೆಕ್ಕಿನ ಮೊತ್ತ ಕೊಡಲು ಬಾಕಿ ಇಲ್ಲಾ ಎಂದರೆ ಸರಿಯಲ್ಲ. ಆರೋಪಿ ಹೆಸರನ್ನು ಕೆಡಿಸುವ ಉದ್ದೇಶಕ್ಕೆ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಭದ್ರತೆಗಾಗಿ ಪಡೆದ ಚೆಕ್ಕನ್ನು ದುರುಪಯೋಗಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ನೊಟೀಸನ್ನು ದಿ ಃ 15.05.2025 ರಂದು ನೀಡಿರುತ್ತೇವೆ. ಆರೋಪಿ ಸದರಿ ನೊಟೀಸನ್ನು ಸ್ವೀಕರಿಸಿರುತ್ತಾರೆ. ಮಾವಿನಕಟ್ಟೆ ಗ್ರಾಮದ ಸರ್ವೆ ನಂಬರ್ 632/2 ಜಮೀನಿನ ಮೇಲೆ ಸಾಲ ಪಡೆದಿದ್ದರು. ನಾನು ಹೇಳುವಂತಹ ಗ್ರಾಮ ಭಟ್ಕಳ ತಾಲೂಕಿನಲ್ಲಿ ಇಲ್ಲಾ ಎಂದರೆ ಸರಿಯಲ್ಲ. ಆರೋಪಿಗೆ ಯಾವುದೇ ನೋಟೀಸನ್ನು ನೀಡಿದೇ ಇದ್ದ ಕಾರಣ ಸದರಿ ಚೆಕ್ಕಿನ ಪ್ರಕರಣವು ನಡೆಯತಕ್ಕದ್ದಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ. ಹೇ.ಕೇ. ಸರಿ ಇದೆ

ಸಹಿ ಇದೆ
ಪ್ರ.ದ.ನ್ಯಾ.ದಂ., ಭಟ್ಕಳ